O.S.182/2020 DW-1

ದಿನಾಂಕಃ 01.07.2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃವಾದಿ ಪರ ವಕೀಲರಿಂದಃ**

ಸರ್ವೆ ನಂ.16 ರಲ್ಲಿ ನನ್ನ ತಂದೆಯವರಿಗೆ ಜಮೀನು ಮಂಜೂರಾಗಿರುತ್ತದೆ. ನಮಗೆ ಮಂಜೂರಾದ ಜಮೀನು ಇನ್ನೂ ಪೋಡಾಗಿರುವುದಿಲ್ಲ. ನಾನು ನನ್ನ ತಂದೆಯವರಿಗೆ ಮಂಜೂರಾದ ಜಮೀನಿನ ಪಹಣಿಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. 1998 ರಲ್ಲಿ ನನ್ನ ತಂದೆಯವರಿಗೆ ಸದರಿ ಜಮೀನು ಮಂಜೂರಾಗಿರುತ್ತದೆ. ನಿಡಿ-14 ರಲ್ಲಿ ಎಲ್ ಎನ್ ಡಿ ಆರ್ 18/2000-2001 ಎಂದು ನಮೂದಾಗಿದೆ ಎಂದರೆ ಸಾಕ್ಷಿಯು ಸಾಗುವಳಿ ಚೀಟಿಯಲ್ಲಿರುವ ವಿವರ ನಿಖರವಾಗಿದೆ ಎಂದು ನುಡಿದಿರುತ್ತಾರೆ. ದಾವಾ ಸ್ವತ್ತಿನ ಅಕ್ಕಾ ಪಕ್ಕದಲ್ಲಿ ನಮ್ಮ ಜಮೀನು ಇಲ್ಲ ಎಂದರೆ ಸಾಕ್ಷಿಯು ನಾವೇ ದಾವಾ ಸ್ವತ್ತಿನ ಅನುಭವದಲ್ಲಿ ಇದ್ದೇವೆ ಎಂದು ನುಡಿದಿರುತ್ತಾರೆ. ನಿಪಿ-4 ರಲ್ಲಿ ಸಿದ್ದಲಿಂಗಪ್ಪ ಬಿನ್ ಜೋಗಪ್ಪ ಎಂದು ನಮೂದಾಗಿದೆ ಹಾಗೂ ಅವರು ವಾದಿಯ ತಂದೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.16 ರಲ್ಲಿ ವಾದಿಯ ತಂದೆಗೆ 1 ಎಕರೆ 20 ಗುಂಟೆ ಜಮೀನು ಮಂಜೂರಾಗಿದೆ ಎಂದರೆ ನನಗೆ ಗೊತ್ತಿಲ್ಲ. ಅದರಂತೆ ಅವರ ಹೆಸರಿಗೆ ಕಂದಾಯ ದಾಖಲೆಗಳು ಆಗಿವೆ ಎಂದರೆ ನನಗೆ ಗೊತ್ತಿಲ್ಲ. ಎಮ್ ಆರ್ ವಿಚಾರವಾಗಿ ಹಾಗೂ ಮಂಜೂರಾತಿಯ ವಿಚಾರವಾಗಿ ನಾನು ಯಾವುದೇ ನ್ಯಾಯಾಲಯದಲ್ಲಿ ವಾದಿಯ ವಿರುದ್ಧ ತಕರಾರು ಮಾಡಿಲ್ಲ ಎಂದರೆ ಸರಿ. ದಾವಾ ಸ್ವತ್ತಿನಲ್ಲಿ ವಾದಿಯು ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ನಾವು ವಾದಿಗಳಿಗೆ ತೊಂದರೆ ಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ನಾನು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ.ಹೇ.ಕೇ.ಸರಿ.ಇದೆ.

ಸಹಿ/-

ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,

ಶಿರಾ.